ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ

**ಎಸ್.ಸಿ. ನಂಬರ್ಃ 78/2021**

ಪ್ರಾಸಾಃ **1** ಚಾಸಾಃ **1**

ದಿನಾಂಕಃ **16-01-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ- ಆದೆಮ್ಮ |
| ಗಂಡನ ಹೆಸರು | ಃ- ನಾರಾಯಣಸ್ವಾಮಿ |
| ವಯಸ್ಸು | ಃ- 55 ವರ್ಷ |
| ಉದ್ಯೋಗ | ಃ- ಕೂಲಿ ಕೆಲಸ |
| ವಾಸ ಸ್ಥಳ | ಃ- ಮಾರಾಂಡಹಳ್ಳಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಶ್ರೀ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

(ಶ್ರೀ ಎಸ್ಎಂಜಿ ವಕೀಲರು ಪ್ರಾಸಾ-1 ರವರ ತೆಲುಗು ಭಾಷೆಯನ್ನು ನ್ಯಾಯಾಲಯಕ್ಕೆ ತರ್ಜುಮೆ ಮಾಡಿದ್ದಾರೆ.)

1 ನೇ ಆರೋಪಿ ಗೊತ್ತು. 2 ನೇ ಆರೋಪಿ ಅವನ ತಾಯಿ, 3 ನೇ ಆರೋಪಿ 2 ನೇ ಆರೋಪಿಯ ಮಗಳು. ಮಮತ ನನ್ನ ಮಗಳ ಹೆಸರು. ಅವಳು ಪ್ರಾಪ್ತ ವಯಸ್ಕಳಾಗಿದ್ದಳು. ನನ್ನ ಮಗಳು ಹಗ್ಗದಿಂದ ದಿನಾಂಕಃ 11-05-2020 ರಂದು ನನ್ನ ಮನೆಯಲ್ಲಿಯೇ ಮಧ್ಯಾಹ್ನ 12-45 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನಾನು ಪಕ್ಕದ ಮನೆಯಿಂದ ನಮ್ಮ ಮನೆಗೆ ಬರುವಷ್ಟರಲ್ಲಿ ಅವಳು ಮೃತ ಪಟ್ಟಿದ್ದಳು. ನನ್ನ ಮಗಳು ಮತ್ತು 1 ನೇ ಆರೋಪಿ ಪ್ರೀತಿ ಮಾಡುತ್ತಿದ್ದರು. ನಾವು ಆಗ ಮಗಳಿಗೆ ಬೇರೆ ಕಡೆ ಸಂಬಂಧ ನೋಡುತ್ತಿದ್ದೆವು. ಮಗಳು 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿದಳು. ನನ್ನ ಮಗಳು ಫೋನ್ ಮಾಡಿ ಕೇಳಿದಾಗ 1 ನೇ ಆರೋಪಿ ಪ್ರೀತಿ ಮಾಡುತ್ತಿರುವುದಾಗಿ ಒಪ್ಪಿಕೊಂಡ. 1 ನೇ ಆರೋಪಿ ನಮ್ಮನ್ನು ಖುದ್ದು ಭೇಟಿಯಾಗುವುದಾಗಿ ಒಂದು ತಿಂಗಳು ಕಾಲಾವಕಾಶ ಕೇಳಿದ.

ನಂತರ 1 ನೇ ಆರೋಪಿ, 3 ನೇ ಆರೋಪಿ, 1 ನೇ ಆರೋಪಿಯ ಮಾವ ನಾಗರಾಜ್, ವೇಣುಗೋಪಾಲ್ ನಮ್ಮ ಮನೆಗೆ ಬಂದರು. ಅವರು 1 ನೇ ಆರೋಪಿ ಮದುವೆಯಾಗಲು ಸಿದ್ಧ ಇದ್ದಾನೆ, ಆದರೆ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಕೊಟ್ಟರೇ ಮಾತ್ರ ಮದುವೆಯಾಗುವುದಾಗಿ ಹೇಳಿದರು.

ಆ ದಿನ 2 ನೇ ಆರೋಪಿ ಬಂದಿರಲಿಲ್ಲ, ಆಕೆಯ ಜೊತೆ ಮಾತನಾಡಿ ಪುನಃ ಫೋನ್ ಮಾಡುವುದಾಗಿ ತಿಳಿಸಿ ಹೋದರು. ಅದೇ ದಿನ ರಾತ್ರಿ ಮಗಳ ಜೊತೆ ಫೋನ್ ಮಾಡಿಸಿದಾಗಲೂ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಮತ್ತು ಛತ್ರದಲ್ಲಿ ಮದುವೆ ಮಾಡಿಕೊಟ್ಟರೇ ಮಾತ್ರ ಮದುವೆ ನೆರವೇರುತ್ತದೆ ಎಂದು, ಇಲ್ಲವಾದರೆ ಮಗಳಿಗೆ ಎಲ್ಲಾದರೂ ಬಿದ್ದು ಸಾಯಿ ಎಂದು ಹೇಳಿದ್ದಾರೆ. ಅದೇ ಕಾರಣಕ್ಕೆ ನನ್ನ ಮಗಳು ಬೇಜಾರು ಮಾಡಿಕೊಂಡು, 1 ನೇ ಆರೋಪಿ ಮೋಸ ಮಾಡಿದ ಎಂದು ಜಿಗುಪ್ಸೆಗೊಂಡು, ಪತ್ರ ಬರೆದು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದೇನೆ, ಅದನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಕ್ಕಪಕ್ಕದ ಮನೆಯವರು ಸೇರಿ, ನಾನು ಮಗಳನ್ನು ಕೆಳಗೆ ಇಳಿಸಿ, ಆಸ್ಪತ್ರೆಗೆ ಸಾಗಿಸಿದೆವು. ವೈದ್ಯರು ಮಗಳು ಮಾರ್ಗ ಮಧ್ಯದಲ್ಲಿಯೇ ಮೃತ ಪಟ್ಟಿರುವುದಾಗಿ ಹೇಳಿದರು.

ಅದೇ ದಿನ ಪೊಲೀಸರು ನಮ್ಮ ಮನೆಗೆ ಬಂದರು. ಜಾಗೆ ಎಲ್ಲಾ ಪರಿಶೀಲನೆ ಮಾಡಿದರು. ಪಂಚರನ್ನು ಕರೆಯಿಸಿ, ನಾನು ಜಾಗೆ ತೋರಿಸಿದಂತೆ ಪಂಚನಾಮೆ ಮಾಡಿದ್ದಾರೆ. ಅದನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರಿಗೆ ತುಂಡಾಗಿದ್ದ ಒಂದು ಸೀರೆ, ನನ್ನ ಮಗಳು ಬರೆದ ಪತ್ರ, ಒಂದು ನೋಟ್ ಬುಕ್ ಮತ್ತು ಐದು ಪರೀಕ್ಷಾ ಪ್ರವೇಶ ಪತ್ರ ನೀಡಿದ್ದೇನೆ. ಸೀರೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು. ಡೆತ್ ನೋಟನ್ನು ನಿಪಿ-3 ಎಂದು, ನೋಟ್ ಪುಸ್ತಕವನ್ನು ನಿಪಿ-4 ಎಂದು, 5 ಪರೀಕ್ಷಾ ಪ್ರವೇಶ ಪತ್ರಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿಗಳೇ ನನ್ನ ಮಗಳ ಸಾವಿಗೆ ಕಾರಣ. ಅವರಲ್ಲದೇ ಮೀನಾಕ್ಷಿ, ನಾಗರಾಜ, ವೇಣುಗೋಪಾಲ್ ಕೂಡ ನನ್ನ ಮಗಳ ಸಾವಿಗೆ ಕಾರಣ.

ಅವರೂ ಕೂಡ ಮಾತುಕತೆ ಸಮಯದಲ್ಲಿ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಮತ್ತು ಛತ್ರದಲ್ಲಿ ಮದುವೆ ಮಾಡಿಕೊಡಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಆ ಕಾರಣಕ್ಕೆ ನನ್ನ ಮಗಳು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಸಿ.ಕೋದಂಡಪ್ಪ ವಕೀಲರಿಂದಃ

ನನಗೆ ಕನ್ನಡ ಓದಲು ಬರೆಯಲು ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ನಾನು ಸಹಿ ಮಾಡಿದ್ದೇನೆ, ಅದರಲ್ಲಿ ಏನು ಬರೆದಿದೆ, ಯಾರು ಬರೆದಿದ್ದಾರೆ ಗೊತ್ತಿಲ್ಲ. ಅದೇ ರೀತಿ ನಿಪಿ-2 ರಲ್ಲಿಯೂ ಏನು ಬರೆದಿದೆ, ಯಾರು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಆರೋಪಿಗಳು ನನ್ನ ಮಗಳ ಜೊತೆ ಮಾತನಾಡಿದ್ದಾರೆ ಎನ್ನುವ ಸಂಭಾಷಣೆಯನ್ನು ನಾನು ಕೇಳಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮೊಬೈಲನ್ನು ಪೊಲೀಸರ ವಶಕ್ಕೆ ಕೊಟ್ಟಿದ್ದೇನೆ. ನಿಪಿ-3 ರ ಅಂಶಗಳನ್ನು ನಾನು ಓದಿಲ್ಲ ಎಂದರೆ ಸರಿ. 1 ನೇ ಆರೋಪಿ ಎಂದಿಗೂ ನನ್ನ ಮಗಳ ಜೊತೆ ಫೋನಿನಲ್ಲಿ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳನ್ನು ಮದುವೆ ಮಾಡಿಕೊಳ್ಳುವುದಾಗಿ ಪ್ರಮಾಣ/ಪ್ರಾಮಿಸ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮಗಳ ಮದುವೆ ಸಂಬಂಧ ನಮ್ಮ ಮನೆಗೆ ಬಂದೇ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಕೂಡ ಆರೋಪಿಗಳ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಕಾಲು ಕೆಜಿ ಬಂಗಾರ, ಎರಡು ಲಕ್ಷ ವರದಕ್ಷಿಣೆ ಮತ್ತು ಛತ್ರದಲ್ಲಿ ಮದುವೆ ನೆರವೇರಿಸಬೇಕೆಂದು ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ ನಮ್ಮ ಜಾತಿಯವರನ್ನೇ ಮದುವೆ ಮಾಡಬೇಕೆನ್ನುವ ಇರಾದೆ ಇತ್ತು ಎಂದರೆ ಸರಿ. ಸದರಿ ವಿಷಯ ನನ್ನ ಮಗಳಿಗೂ ತಿಳಿಸಿದ್ದೆ. ನನ್ನ ಮಗಳು ನಾನು ಗೊತ್ತು ಮಾಡಿದ ಹುಡುಗನನ್ನು ಮದುವೆಯಾಗುವುದನ್ನು ನಿರಾಕರಿಸಿದಳು ಎಂದರೆ ಸರಿ. ನಾನು ಗೊತ್ತು ಮಾಡಿದ ಹುಡುಗನನ್ನೇ ಮದುವೆಯಾಗಲು ಮಗಳಿಗೆ ನಾನು ಬಲವಂತ ಮಾಡಿದ ಕಾರಣ ಅವಳು ನೊಂದ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆರೋಪಿಗಳು ಎಂದೂ ನನ್ನ ಮಗಳಿಗೆ ದುಶ್ಪ್ರೇರಣೆ ಮಾಡಿ ಸಾಯುವಂತೆ ಬೈದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**